ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ಅಂಕೋಲಾ ಸಿರ್ಸಿ, ಮಲ್ಲಾಪುರ ತಾಲ್ಲೂಕುಗಳಿಗೆ ಮಂಜೂರಾದ ಕಾಮಗಾರಿಗಳು.

2295(2680) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) :— ಮಾನ್ಯ ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 2001-2002ರಲ್ಲಿ ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ಶಾಸಕರಿಗೆ ಬಿಡುಗಡೆಗೊಂಡ ಅನುದಾನವೆಷ್ಟು?

ಆ) ಈ ವರ್ಷ ಅತ್ಯಂತ ಕಡಿಮೆ ಅನುದಾನ ಬಿಡುಗಡೆಗೊಳ್ಳಲು ಕಾರಣವೇನು?

ಇ) 1998-99, 1999-2000, 2000-2001ರಲ್ಲಿ ನಬಾರ್ಡ್ ಯೋಜನೆಯಲ್ಲಿ ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ಅಂಕೋಲಾ ಮತಕ್ಷೇತ್ರದ ಅಂಕೋಲಾ -ಸಿರ್ಸಿ-ಯಲ್ಲಾಪುರ ತಾಲ್ಲೂಕಿನಲ್ಲಿ ಮಂಜೂರಾದ ಕಾಮಗಾರಿ ಯಾವುವು; ಹಾಗೂ ಮೊತ್ತವೆಷ್ಟು? (ಮಾಹಿತಿ ನೀಡುವುದು)

ಈ) ಕಾಮಗಾರಿಗಳು ಯಾವ ಹಂತದಲ್ಲಿವೆ?

ಶ್ರೀ ಬಿ. ರಮಾನಾಥ ರೈ (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು) :—

ಅ) ಶಾಸಕರಿಗೆ ಅನುದಾನವನ್ನು ಬಿಡುಗಡೆ ಮಾಡಲಾಗುವುದಿಲ್ಲ. 2001-2002ರಲ್ಲಿ ಮಂಡಳಿಗೆ 431.25 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಪ್ರತಿ ಕ್ಷೇತ್ರಕ್ಕೆ ಲಭ್ಯವಾಗುವ ಮೊತ್ತ ಸರ್ಕಾರವು ಕ್ರಿಯಾ ಯೋಜನೆ ಅಂಗೀಕರಿಸಿದ ನಂತರ ತಿಳಿಯುವುದು.

ಆ) ಸಂಪನ್ಮೂಲವನ್ನಾಧರಿಸಿ ಹಣವನ್ನು ಬಿಡುಗಡೆ ಮಾಡಲಾಗುವುದು.

ಕಾಮಗಾರಿಯ ಹೆಸರು	ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ)
1) ಅಗಸೂರು-ಶಿರಗುಂಡಿ ರಸ್ತೆ (ಅಂಕೋಲಾ ತಾಲ್ಲೂಕು ಆರ್.ಐ.ಡಿ.ಎಫ್. III 1998-99)	11.39
2) ಅಗಸಿನ ಹಳ್ಳದಿಂದ ಹೊಸ ಕಂಟಿ ರಸ್ತೆ ಸೇತುವೆ ಅಂಕೋಲ ತಾಲ್ಲೂಕು ಆರ್.ಐ.ಡಿ.ಎಫ್. IV 2000-2001)	9.10

ಇ) ಮೇಲೆ ತಿಳಿಸಿದ ಮೊದಲನೆ ಕಾಮಗಾರಿಯು ಮುಗಿದಿದ್ದು, ಎರಡನೇ ಕಾಮಗಾರಿ ಪ್ರಗತಿಯಲ್ಲಿದೆ.